PDF Compressor Free Version

ಕೆ.ಎಂ.ಎಫ್

RNI NO : 29773/77 Registered No/RNP/KA/BGS-103/2015-17
Date of Publication 26th December 2016; Posted at Bangalore
PSO Mysore Road BG 560 026 on 28th of every month
Licensed to post without Pre-payment WPP No.-3

# ಕ್ಷೀರಸಾಗರ

KSHEERASAGAR MONTHLY

ಸಂಪುಟ Vol. : 39 | ಜನವರಿ January - 2017 | ಸಂಚಿಕೆ Issue: 6 | ಪುಟ Pages -12

## ರಾಜ್ಯದಲ್ಲಿ ಮೊದಲಬಾರಿಗೆ ಹೈನುಗಾರರ ಮನೆಗೆ ಹಾಲು ಶೀತಲೀಕರಣ ಘಟಕ



ಇತ್ತೀಚಿಗೆ ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ ಹಾಗೂ ದ.ಕ.ಜಿಲ್ಲಾ ಸಹಕಾರಿ ಯೂನಿಯನ್ ಸಹಯೋಗದಲ್ಲಿ ಕುಲಶೇಖರದ ಮಂಗಳೂರು ಡೇರಿ ಆವರಣದಲ್ಲಿ 63 ನೇ ಅಖಿಲ ಭಾರತದ ಸಹಕಾರಿ ಸಪ್ತಾಹದ ಪ್ರಯುಕ್ತ ಸಹಕಾರ ಸಂಘಗಳು ತಂತ್ರಜ್ಞಾನ ಅಳವಡಿಸುಕೊಳ್ಳುವ ದಿನ ಆಚರಿಸಲಾಯಿತು. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ಸಹಕಾರಿ ಹಾಲು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಪಿ. ನಾಗರಾಜ್ ವಹಿಸಿದ್ದರು. ನಿಟ್ಟೆ ವಿವಿ ಉಪಕುಲಪತಿ ಪ್ರೊ.ಡಾ.ಎಂ. ಶಾಂತರಾಮ ಶೆಟ್ಟಿ, ದ.ಕ. ಹಾಲು ಒಕ್ಕೂಟದ ಅಧ್ಯಕ್ಷರಾದ ಶ್ರೀ ರವಿರಾಜ ಹೆಗ್ಡೆ, ದ.ಕ. ಜಿಲ್ಲಾ ಸಹಕಾರಿ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ಹರೀಶ್ ಆಚಾರ್, ಒಕ್ಕೂಟ ವ್ಯವಸ್ಥಾಪಕ ನಿರ್ದೇಶಕ ಡಾ.ಬಿ.ವಿ. ಸತ್ಯನಾರಾಯಣ, ದಾಕ ಸಹಕಾರಿ ಯೂನಿಯನ್ ಕಾರ್ಯ ನಿರ್ವಹಣಾ ಅಧಿಕಾರಿ ಶ್ರೀ. ಹೊನ್ನಪ್ಪ, ಸಹಕಾರಿ ಯೂನಿಯನಿನ ನಿವೃತ್ತ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ ಶ್ರೀಮತಿ.ಸಾವಿತ್ರಿ ರೈ, ಸಹಕಾರ ಸಂಘಗಳ ಉಪನಿಬಂಧಕರು ಶ್ರೀ ಬಿ.ಕೆ. ಸಲೀಮ್ ಮತ್ತು ಒಕ್ಕೂಟದ ನಿರ್ದೇಶಕರುಗಳು ಹಾಗೂ ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ರಾಜ್ಯದಲ್ಲಿ ಪ್ರಥಮ ಬಾರಿಗೆ 45 ಲಕ್ಷ ರೂ. ವೆಚ್ಚದಲ್ಲಿ ದಕ್ಷಿಣ ಕನ್ನಡ ಹಾಲು ಒಕ್ಕೂಟದಲ್ಲಿ ಸಂಚಾರಿ ಹಾಲು ಶೀತಲೀಕರಣ ಘಟಕ ಅಳವಡಿಸಿಕೊಂಡಿದೆ. ಅಖಿಲ ಭಾರತದ ಸಹಕಾರಿ ಸಪ್ತಾಹದ ಪ್ರಯುಕ್ತ ಸಹಕಾರ ಸಂಘಗಳು ತಂತ್ರಜ್ಞಾನ ಅಳವಡಿಸುಕೊಳ್ಳುವ ದಿನ ಆಚರಿಸಲಾಯಿತು. ನೂತನ ನಂದಿನಿ ತುಪ್ಪ ಉತ್ಪಾದನ ಘಟಕ, ಸಂಚಾರಿ ಹಾಲು ಶೀತಲೀಕರಣ ಘಟಕ ಉದ್ಘಾಟನೆ ಹಾಗೂ ನಂದಿನಿ ತೃಪ್ತಿ (ಯು.ಎಚ್.ಟಿ.) ಹಾಲು 180 ಎಂ.ಎಲ್.ಪ್ಯಾಕೆಟ್ ಬಿಡುಗಡೆಗೊಳಿಸಲಾಯಿತು.

**ನಂದಿನಿ ಕುಟುಂಬಕ್ಕೆ – 2017ನೇ ಹೊಸ ವರ್ಷದ ಶುಭಾಶಯಗಳು**

PDF Compressor Free Version





# ಕರ್ನಾಟಕ ಹಾಲು ಮಹಾಮಂಡಳಿಯ ಅಧ್ಯಕ್ಷರ ನುಡಿ...



**ಆತ್ಮೀಯ ಹಾಲು ಉತ್ಪಾದಕ ಬಂಧುಗಳೇ,**

ಕೆಎಂಎಫ್ ಅಧ್ಯಕ್ಷನಾಗಿ ಇಲ್ಲಿಯವರೆಗೂ ನಾನು ಕೈಗೊಂಡ ಅಭಿವೃದ್ಧಿ ಕೆಲಸಗಳು ಅಂದರೆ ಪಶು ಆಹಾರ ಸೂತ್ರ ಬದಲಾವಣೆ, ಕೆಎಂಎಫ್‌ನಲ್ಲಿ ಪಾರದರ್ಶಕ ವ್ಯವಹಾರ, ಹಾಲು ಉತ್ಪಾದಕರಿಗೆ ಮತ್ತು ರಾಸುಗಳಿಗೆ ವಿಮೆ ಸೌಲಭ್ಯ ಕಲ್ಪಿಸಲು ಕ್ರಮವಿಟ್ಟಿರುವುದು, ನಂದಿನಿ ಮಾರುಕಟ್ಟೆ ವಿಸ್ತರಣೆ, ಹೀಗೇ ವಿವಿಧ ರೀತಿಯ ಅಭಿವೃದ್ಧಿ ಕೆಲಸಗಳನ್ನು ಮಾಡಿರುವುದು ನಿಮ್ಮೊಂದಿಗೆ ಈ ಹಿಂದಿನ ಸಂಚಿಕೆಗಳಲ್ಲಿ ತಿಳಿಸಿದ್ದೇನೆ. ಈ ಎಲ್ಲಾ ಅಭಿವೃದ್ಧಿ ಕೆಲಸಗಳ ಹಿಂದೆ ರಾಜ್ಯದ ಹಾಲು ಉತ್ಪಾದಕರ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವ ಮೂಲಕ ಜೀವನ ಕ್ರಮವನ್ನು ಸುಧಾರಿಸುವ ಹಾಗೂ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳ, ಪ್ರಾಂತೀಯ ಸಹಕಾರ ಹಾಲು ಒಕ್ಕೂಟಗಳ ಮತ್ತು ಮಹಾಮಂಡಳದ ಆರ್ಥಿಕ ಆರೋಗ್ಯ ಮತ್ತು ಲಾಭದಾಯಕತೆಯನ್ನು ಸುಧಾರಿಸುವ ಉದ್ದೇಶಗಳನ್ನು ಹೊಂದಿರುತ್ತವೆ. ಮನುಷ್ಯನ ಬದುಕು ಶಾಶ್ವತವಲ್ಲ ಆದರೇ ಆತನ ಉತ್ತಮವಾದ ಕೆಲಸಗಳು ಶಾಶ್ವತವೆಂದು ನಂಬಿದ್ದೇನೆ. ನನ್ನ ಜೀವನದ ಅತ್ಯುತ್ಕಟ ಆಸೆಯೆಂದರೆ ಕರ್ನಾಟಕ ರಾಜ್ಯವನ್ನು ಅಮೂಲ್ ಮಾದರಿಗೆ ಪೂರ್ಣವಾಗಿ ಅಳವಡಿಸುವುದು ಮತ್ತು ರಾಜ್ಯಕ್ಕೆ ಹೈನು ಅಭಿವೃದ್ಧಿಯಲ್ಲಿ ಪ್ರಥಮ ಸ್ಥಾನವನ್ನು ಗಳಿಸುವುದು ಆಗಿರುತ್ತದೆ.

ನನ್ನ ಆಸೆಯನ್ನು ಸಾಕ್ಷಾತ್ಕರಿಸಿ ಕೊಳ್ಳಬೇಕಾದರೆ ಈ ಕ್ಷೇತ್ರದ ಅನೇಕ ವಿಭಾಗಗಳಲ್ಲಿ ಇರುವ ದೌರ್ಬಲ್ಯಗಳನ್ನು ಮತ್ತು ಕೊರತೆಗಳನ್ನು ನಿವಾರಿಸಬೇಕೆಂಬ ಅರಿವು ಇದೆ. ನಾನು ತಜ್ಞರೊಡನೆ ಸಮಾಲೋಚನೆ ಮತ್ತು ಆಳವಾದ ಚಿಂತನೆ ಮೂಲಕ ಮೂರು ವರ್ಷಗಳ ಒಂದು ಚಿತ್ರಣವನ್ನು ರೂಪಿಸಿದ್ದು, ಅದು ಅತಿ ಆಸೆಯಿಂದ ಕೂಡಿದ್ದರೂ ಕಾರ್ಯಗತಸಾಧ್ಯ ಎಂದು ಭಾವಿಸಿದ್ದೇನೆ, ಅದರ ರೂಪು ರೇಷೆಗಳು ಈ ಕೆಳಗಿನಂತಿವೆ.

**1. ಮೂಲ ಸೌಕರ್ಯ ಅಭಿವೃದ್ಧಿ :**

(ಎ) ಪಶು ಆಹಾರದ ಬೇಡಿಕೆಯನ್ನು ಪೂರ್ಣವಾಗಿ ಒದಗಿಸಲು ಅಗತ್ಯವಾದಷ್ಟು ಹೆಚ್ಚುವರಿ ಸಾಮರ್ಥ್ಯದ ಸೃಜನೆ;

(ಬಿ) ಸಿಹಿ ಮತ್ತು ಸಿಹಿಯೇತರ ತಿನಿಸುಗಳ ಸಲುವಾಗಿ ಸಾಂದ್ರಕ್ಷೀರದ ಉತ್ಪಾದನೆಗೆ ಸಾಂದ್ರೀಕರಣ ಸ್ಥಾವರದ ಸ್ಥಾಪನೆ;

(ಸಿ) ಗ್ಲೈಕಾಲ್ ಶೀತಲೀಕರಣ ಸ್ಥಾವರದ ಸ್ಥಾಪನೆ;

(ಡಿ) ಮಹಾಮಂಡಳದ ಮತ್ತು ಒಕ್ಕೂಟಗಳ ಹಾಲಿ ಇರುವ ಯಂತ್ರೋಪಕರಣಗಳ ಮತ್ತು ಸ್ಥಾವರಗಳ ಆಧುನೀಕರಣ;

(ಇ) ಪೂರ್ಣ ಹೆಚ್ಚುವರಿ ಹಾಲನ್ನು ಮೌಲ್ಯವರ್ಧಿತ ಉತ್ಪನ್ನಗಳನ್ನಾಗಿ ಪರಿವರ್ತಿಸಲು ಮೂಲ ಸೌಕರ್ಯದ ಸೃಜನೆ.

**2. ಲಿಂಗನಿರ್ಧಾರಿತ ವೀರ್ಯನಳಿಕೆಗಳ ತಂತ್ರಜ್ಞಾನದ ಅಳವಡಿಕೆ**

(ಎ) ಕರಾವು ರಾಸುಗಳು ಶೇ 92% ರಷ್ಟು ಹೆಣ್ಣು ಕರುಗಳನ್ನು ಹಾಕುವ ಲಿಂಗನಿರ್ಧಾರಿತ ವೀರ್ಯನಳಿಕೆಗಳ ತಂತ್ರಜ್ಞಾನದ ಅಳವಡಿಕೆ;

(ಬಿ) (ಹೋರಿಯ ವೀರ್ಯದ ಗುಣಮಟ್ಟ, ಪಶು ಆಹಾರ ಮತ್ತು ವರ್ಧಿತ ಹುಟ್ಟುವಳಿಗಳನ್ನು ಖಾತರಿಪಡಿಸುವಲ್ಲಿ ಬಹಳ ಪ್ರಮುಖ -ವಾದ ಪಾತ್ರವನ್ನು ವಹಿಸುವುದರಿಂದ) ಹೋರಿಗಳಿರುವ ನಂದಿನಿ ವೀರ್ಯಕೇಂದ್ರದ ಬಲವರ್ಧನೆ;

(ಸಿ) ದೈನಂದಿನ ಆರೋಗ್ಯ ತಪಾಸಣೆ ಮತ್ತು ಸಕಾಲಿಕ ಆರೋಗ್ಯ ನಿಗಾ;

(ಡಿ) ದೇಸಿತಳಿಯ ಹಸುಗಳಿಗೆ ಪ್ರೋತ್ಸಾಹನ ಮತ್ತು ರೈತರಲ್ಲಿ ಅರಿವು ಮೂಡಿಸುವುದು;

(ಇ) ತಳಿ ಆಯ್ಕೆಯ ಬಗ್ಗೆ ರೈತರಲ್ಲಿ ಅರಿವು ಮೂಡಿಸುವುದು.

**3. ಸಂಶೋಧನೆ ಮತ್ತು ಅಭಿವೃದ್ಧಿ:**

(ಎ) ಗುಣ ನಿಯಂತ್ರಣ ಪ್ರಯೋಗಾಲಯ, ಆಹಾರ ಪರೀಕ್ಷಣಾ ಪ್ರಯೋಗಾಲಯ, ಪೌಷ್ಠಿಕಾಂಶ ಪ್ರಯೋಗಾಲಯ, ಪ್ರಮಾಣೀಕರಣ ಪ್ರಯೋಗಾಲಯ ಇತ್ಯಾದಿಗಳ ಸ್ಥಾಪನೆ;

...2ನೇ ಪುಟದಲ್ಲಿ ಮುಂದುವರೆದಿದೆ

PDF Compressor Free Version



(ಬಿ) ಉನ್ನತ ಅಧ್ಯಯನ ಮತ್ತು ಸಂಶೋಧನೆಗಾಗಿ ವಿಶ್ವ ವಿದ್ಯಾಲಯಗಳ, ಸಂಶೋಧನಾ ಸಂಸ್ಥೆಗಳ ಮತ್ತು ವಿದ್ಯಾ ಸಂಸ್ಥೆಗಳ ಜೊತೆ ಹೊಂದಾಣಿಕೆ;

(ಸಿ) ತಂತ್ರಜ್ಞಾನ ಉನ್ನತೀಕರಣದ ಅಳವಡಿಕೆ;

(ಡಿ) ಅಗತ್ಯ ಪ್ರಮಾಣದ ಮತ್ತು ಅಂಗೀಕೃತ ತರಬೇತಿಗೆ ಅವಕಾಶ ಕಲ್ಪಿಸುವುದು;

(ಇ) ಅಧ್ಯಯನ ಮತ್ತು ಸಂಶೋಧನೆಯಲ್ಲಿ ಹೆಚ್ಚಿನ ಅನುಭವವುಳ್ಳ ಪರಿಣಿತರ ನೇಮಕ;

(ಎಫ್) ಇತ್ತೀಚಿನ ಸಂಪರ್ಕ ತಂತ್ರಜ್ಞಾನಗಳಾದ ಚಲನಚಿತ್ರಗಳ, ಸಾಕ್ಷ್ಯಚಿತ್ರಗಳ, ಸಂದೇಶಗಳ, ವಿದ್ಯುಜ್ಜನ್ಯ ಅಂಚೆಗಳ, ಪ್ರಾತ್ಯಕ್ಷಿಕೆಗಳ, ಗುಂಪು ಚರ್ಚೆಗಳ ಮೂಲಕ ಅರಿವು ಮೂಡಿಸುವುದು.

**4. ಮಾರಾಟ / ಮಾರುಕಟ್ಟೆ ಸೌಲಭ್ಯ:**

(ಎ) ಹಾಲಿ ಇರುವ ಮಾರುಕಟ್ಟೆಗಳ ಅಭಿವೃದ್ಧಿ ಹಾಗೂ ರಾಜ್ಯದೊಳಗೆ, ರಾಜ್ಯದ ಹೊರಗೆ ಅದರೆ ದೇಶದೊಳಗೆ ಮತ್ತು ವಿದೇಶಿ ನೆಲೆಗಳಲ್ಲಿ ಹೊಸ ಮಾರುಕಟ್ಟೆಗಳ ಸ್ಥಾಪನೆ;

(ಬಿ) ಸಗಟು ಹಾಲಿನ ಮಾರಾಟವನ್ನು ನಿಲ್ಲಿಸುವುದು ಮತ್ತು ಮೌಲ್ಯವರ್ಧಿತ ಹಾಲಿನ ಉತ್ಪನ್ನಗಳ ತಯಾರಿಕೆಗಾಗಿ ಸ್ಥಾವರದ ಸ್ಥಾಪನೆ ಮೌಲ್ಯವರ್ಧಿತ ಉತ್ಪನ್ನಗಳ ಚಿಲ್ಲರೆ ಮಾರಾಟಕ್ಕೆ ಅವಕಾಶ ಕಲ್ಪಿಸುವುದು;

(ಸಿ) ಮಾರಾಟ ಮತ್ತು ರಫ್ತು ಏಜೆನ್ಸಿಗಳೊಡನೆ ಒಪ್ಪಂದ ಮಾಡುವುದು.

ಮುಖ್ಯವಾಗಿ ಸಹಕಾರ ರಂಗದ ಸಂಸ್ಥೆಗಳಲ್ಲಿ ಪಾರದರ್ಶಕತೆ, ಪ್ರಾಮಾಣಿಕತೆ, ಶ್ರಮ, ನಿಷ್ಠೆ, ಶ್ರದ್ಧೆ ಇದ್ದಲ್ಲಿ ಗುಣಮಟ್ಟ ಸುಧಾರಣೆಯಷ್ಟೇ ಅಲ್ಲದೇ, ಉತ್ತಮ ಗುಣಮಟ್ಟದ ಸೇವೆಗಳನ್ನು ಯುಕ್ತದರದಲ್ಲಿ ಒದಗಿಸುವುದು, ಸಹಕಾರ ಸಂಸ್ಥೆಗಳ ಲಾಭದಾಯಕ ಮತ್ತು ಆರ್ಥಿಕ ಸ್ಥಿತಿ ವರ್ಧಿಸುವುದು, ಗ್ರಾಹಕರಲ್ಲಿ ಸಹಕಾರ ಸಂಸ್ಥೆಗಳ ಸೇವೆಗಳ ಗುಣಮಟ್ಟ ಉನ್ನತಸ್ತರದ್ದು ಎಂಬ ವಿಶ್ವಾಸ ಮೂಡಿಸುವುದು ಇತ್ಯಾದಿ ವ್ಯವಹಾರಗಳ ನೈಜತೆಯನ್ನು ಪುನಸ್ಥಾಪಿಸುವುದು ಸಾಧ್ಯ ಎಂಬುದು ನನ್ನ ದೃಢವಾದ ನಂಬಿಕೆ. ಆದರೆ ಇಂದಿನ ವಾತಾವರಣವು ಇದನ್ನು ಪ್ರೋತ್ಸಾಹಿಸುವುದಿಲ್ಲ ಎಂಬುದು ವಿಷಾದ ಪಡುವ ಸಂಗತಿ. ಕಳೆದೆರಡು ವರ್ಷಗಳಲ್ಲಿ ಗ್ರಹಿಸಿ ಅರ್ಥಮಾಡಿಕೊಂಡದ್ದು – ಅತ್ಯಲ್ಪ ಇನ್ನೂ ಮಾಡಬೇಕಾದದ್ದು – ಹಿಮಾಲಯದೆತ್ತರ. ಅದನ್ನು ಸಾಧಿಸಲು ಸರ್ಕಾರದ, ಅಧಿಕಾರಿಗಳ, ಸಹಕಾರಿಗಳ, ಸದಸ್ಯರ ಸಹಕಾರ ಮತ್ತು ವಿಶ್ವಾಸ ಅತಿಮುಖ್ಯ. ನನ್ನ ಮುಖ್ಯ ಗುರಿಯೆಂದರೆ ಕರ್ನಾಟಕವನ್ನು ಹೈನು ಉದ್ಯಮದ ಭೂಪಟದ ಶಿಖರಕ್ಕೇರಿಸುವುದು. ಅದಕ್ಕಾಗಿ ಎಲ್ಲರ ಸಹಕಾರ ಮತ್ತು ಬೆಂಬಲವನ್ನು ಕೋರುತ್ತೇನೆ.

**ಸರ್ವರಿಗೂ ಹೊಸ ವರ್ಷ – 2017 ಮತ್ತು ಸಂಕ್ರಾಂತಿ ಹಬ್ಬದ ಶುಭಾಶಯಗಳು**

ವಂದನೆಗಳೊಂದಿಗೆ,

ಇಂತಿ ರೈತರ ಸೇವೆಯಲ್ಲಿ

**ಪಿ. ನಾಗರಾಜು**

**ಮೇವಿನ ಸಮರ್ಪಕ ಬಳಕೆಗೆ – ಮೇವನ್ನು ಕತ್ತರಿಸಿ ಉಪಯೋಗಿಸಿ**

**ಹಸಿರು ಮೇವು ಬಳಸಿ – ಹೆಚ್ಚು ಲಾಭಗಳಿಸಿ**



- ದಪ್ಪ ಕಾಂಡದ ಮೇವನ್ನು 1 ರಿಂದ 2 ಅಂಗುಲದಷ್ಟು ಕತ್ತರಿಸಿ ಉಪಯೋಗಿಸಿ.
- ಕತ್ತರಿಸುವುದರಿಂದ ಮೇವಿನ ನಷ್ಟ ತಪ್ಪಿಸಿ.
- ಇದರಿಂದ ದನಗಳು ಹೆಚ್ಚು ಮೇವನ್ನು ತಿನ್ನುವುದಲ್ಲದೇ ಸುಲಭವಾಗಿ ಜೀರ್ಣವಾಗುತ್ತದೆ.

PDF Compressor Free Version

PDF Compressor Free Version

PDF Compressor Free Version



# ಕಹಾಮಗೆ NCDFI MD – ಭೇಟಿ

## NCDFI e Market ಮೂಲಕ KMF ವ್ಯವಹಾರ

1. ನಂದಿನಿ ಹಾಲು ಮತ್ತು ಉತ್ಪನ್ನಗಳು ಮಾರಾಟ – ರೂ.100 ಕೋಟಿ
2. ಪಶು ಆಹಾರ ಕಚ್ಚಾ ಪದಾರ್ಥಗಳ ಖರೀದಿ – ರೂ.120 ಕೋಟಿ



ದಿನಾಂಕ 16.12.2016 ರಂದು NCDFI ನ ವ್ಯವಸ್ಥಾಪಕ ನಿರ್ದೇಶಕರು ಶ್ರೀ ಕೆ.ಸಿ. ಸುಪೇರ್‌ಕರ್‌ರವರು ಕಹಾಮದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಾಕೇಶ್ ಸಿಂಗ್ ಭಾ. ಆ. ಸೇ ರವರೊಂದಿಗೆ ಭೇಟಿ. ಕಹಾಮ ನಿರ್ದೇಶಕರುಗಳಾದ ಡಾ.ಸುರೇಶ್ ಬಾಬು, ಡಾ. ರಾಮಚಂದ್ರ ಭಟ್, ಡಾ. ಗೋಪಾಲ್, ಶ್ರೀಎಮ್.ಟಿ.ಕುಲ್ಕರ್ಣಿ, Business Development ಉಪಧ್ಯಾಕ್ಷರಾದ ಶ್ರೀ ಮನೀಶ್ ತ್ರಿಪಾಠಿ ಮತ್ತಿತರು ಹಾಜರಿದ್ದರು.

ಕಹಾಮ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ರಾಕೇಶ್ ಸಿಂಗ್ ಭಾ.ಆ.ಸೇ ರವರು ಮತ್ತು ನಿರ್ದೇಶಕರುಗಳು NCDFI ನ ವ್ಯವಸ್ಥಾಪಕ ನಿರ್ದೇಶಕರು ಶ್ರೀ ಕೆ.ಸಿ. ಸುಪೇರ್‌ಕರ್‌ರವರೊಂದಿಗೆ ಸುದೀರ್ಘವಾಗಿ ಚರ್ಚಿಸಿ ಕಹಾಮಗೆ ಅತಿ ಹೆಚ್ಚು ಸಹಕರಿಸುವಂತೆ ಕೋರಿ ನಂದಿನಿಯ ಉಳಿದ ಉತ್ಪನ್ನಗಳನ್ನು ಸಮೇತ ಭಾರತಿಯ ವಾಯುಪಡೆ, BSF ಮತ್ತು ಮಿಲಿಟರಿ ಯೋಧರುಗಳಿಗೆ ಸರಬರಾಜು ಮಾಡಲು ಕಹಾಮ ಸಿದ್ಧವಿದ್ದು ಈ ಬಗ್ಗೆ ಸಹಕರಿಸಲು ಕೋರಿಕೆ ಪತ್ರವನ್ನು ನೀಡಲಾಗಿದೆ. ಇದರಿಂದ ಕರ್ನಾಟಕ ಹಾಲು ಮಹಾಮಂಡಳಿ, ಒಕ್ಕೂಟಗಳಿಗೆ, ಸಂಘಗಳಿಗೆ ಮತ್ತು ಹಾಲು ಉತ್ಪಾದಕರಿಗೆ ಆರ್ಥಿಕವಾಗಿ ಸಹಕಾರಿಯಾಗಲಿದೆ.

PDF Compressor Free Version



# "ಕ್ಷೀರ ಕ್ರಾಂತಿ" ಹರಿಕಾರ ಹಾಗೂ "ಹೈನೋದ್ಯಮದ ಪಿತಮಹಾ" ಪದ್ಮವಿಭೂಷಣ ಡಾ.ವರ್ಗೀಸ್ ಕುರಿಯನ್‌ರವರ ಜನ್ಮದಿನವನ್ನು "ರಾಷ್ಟ್ರೀಯ ಹಾಲು ದಿನಾಚರಣೆ"ಯನ್ನಾಗಿ ಆಚರಣೆ



ದಿನಾಂಕ 26.11.2016 ರಂದು "ಕ್ಷೀರ ಕ್ರಾಂತಿ","ಹೈನೋದ್ಯಮದ ಪಿತಾಮಹಾ ಪದ್ಮವಿಭೂಷಣ ಡಾ. ವರ್ಗೀಸ್ ಕುರಿಯನ್ ರವರ ಜನ್ಮ ದಿನಾಚರಣೆಯನ್ನು "ರಾಷ್ಟ್ರೀಯ ಹಾಲು ದಿನಾಚರಣೆಯನ್ನಾಗಿ ಆಚರಿಸಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ಮತ್ತು ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿರುವ ರೋಗಿಗಳಿಗೆ ಉಚಿತವಾಗಿ ಪರಿಶುದ್ಧ ನಂದಿನಿ ಯು.ಹೆಚ್.ಟಿ ಸುವಾಸಿತ ಹಾಲನ್ನು ಕರ್ನಾಟಕ ಹಾಲು ಮಹಾಮಂಡಳಿಯ ಮಾನ್ಯ ಅಧ್ಯಕ್ಷರಾದ ಶ್ರೀ.ಪಿ.ನಾಗರಾಜು, ಡಾ.ಸಿ.ಮಂಜುನಾಥ್, ನಿರ್ದೇಶಕರು, ಜಯದೇವ ಆಸ್ಪತ್ರೆ ಮತ್ತು ಡಾ.ಕೆ.ಬಿ.ಲಿಂಗೇಗೌಡ, ನಿರ್ದೇಶಕರು, ಕಿದ್ವಾಯಿ ಆಸ್ಪತ್ರೆರವರುಗಳು ವಿತರಣೆ ಮಾಡುವ ಮೂಲಕ ವಿಶಿಷ್ಟವಾಗಿ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕಹಾಮದ ಹಿರಿಯ ಅಧಿಕಾರಿಗಳಾದ ಶ್ರೀ.ಎಂ.ಟಿ.ಕುಲಕರ್ಣಿ,ನಿರ್ದೇಶಕರು (ಮಾರುಕಟ್ಟೆ), ಶ್ರೀ.ಬಿ.ನಟರಾಜ್,ನಿರ್ದೇಶಕರು (ಗುಣನಿಯಂತ್ರಣ), ಮತ್ತು ಮೂರು ಸಂಸ್ಥೆಗಳ ಹಿರಿಯ ವೈದ್ಯರು ಹಾಗೂ ಇತರೆ ಅಧಿಕಾರಿಗಳು ಹಾಜರಿದ್ದು ಹಾಲು ವಿತರಣೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಕ್ಷೀರಸಾಗರ ಮಾಸಪತ್ರಿಕೆ
ರಾಜ್ಯ ಸಹಕಾರಿ ಹೈನುಗಾರರ ಮಾರ್ಗದರ್ಶಿ
ಕ್ಷೀರಸಾಗರ ಚಂದಾದಾರರಾಗಲು
ವಾರ್ಷಿಕ ಚಂದಾ ರೂ. : 50-00
ಆಜೀವ ಚಂದಾ ರೂ. : 500-00
ಡಿ.ಡಿ. [illegible] Managing Director, KMF, Bangalore ರವರ ಹೆಸರಿಗೆ ಪಡೆದುಕೊಳ್ಳುವುದು.

[illegible]
ಸಂಪಾದಕರು, ಕ್ಷೀರಸಾಗರ ಪತ್ರಿಕೆ, ಕರ್ನಾಟಕ ಹಾಲು ಮಹಾಮಂಡಳಿ, ಕೆ.ಎಂ.ಎಫ್. ಕಾಂಪ್ಲೆಕ್ಸ್, ಡಾ. ಎಂ.ಹೆಚ್. ಮರಿಗೌಡ ರಸ್ತೆ, ಬೆಂಗಳೂರು-560 029
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಸಾರ್ವಜನಿಕ ಸಂಪರ್ಕಾಧಿಕಾರಿ
ದೂರವಾಣಿ: 9591170922, 080-26096828
[illegible]



"ಸುರಕ್ಷಿತವಾದ, ಶುದ್ಧವಾದ ನಂದಿನಿ ಹಾಲನ್ನೇ ಉಪಯೋಗಿಸಿ"

PDF Compressor Free Version

PDF Compressor Free Version

PDF Compressor Free Version

# ಕೃತಕ ಗರ್ಭಧಾರಣೆಯಿಂದ – ತಳಿಯಾಭಿವೃದ್ಧಿ

## ಭಾರತ ಸರ್ಕಾರದ ಕೃಷಿ ಮಂತ್ರಾಲಯದಿಂದ
## ಕಹಾಮದ ನಂದಿನಿ ವೀರ್ಯಾಣು ಕೇಂದ್ರಕ್ಕೆ "ಎ ಶ್ರೇಣಿ"ಯ ಪ್ರಮಾಣ ಪತ್ರ

ಕಳೆದ 32 ವರ್ಷಗಳಿಂದ ವೀರ್ಯಾನಳಿಕೆಗಳ ಉತ್ಪಾದನೆ ಮತ್ತು ವಿತರಣೆಯಲ್ಲಿ ತೊಡಗಿಸಿಕೊಂಡು ಕರ್ನಾಟಕ ರಾಜ್ಯದಲ್ಲಿ ಜಾನುವಾರು ತಳಿ ಅಭಿವೃದ್ಧಿಯಿಂದ ಕ್ಷೀರ ಕ್ರಾಂತಿಗೆ ಕಾರಣವಾಗಿರುವ ಹೆಸರುಘಟ್ಟದಲ್ಲಿನ ಕಹಾಮ ನಂದಿನಿ ವೀರ್ಯಾನು ಕೇಂದ್ರಕ್ಕೆ ಸತತವಾಗಿ ನಾಲ್ಕನೇ ಬಾರಿಗೆ ದಿನಾಂಕ 26.11.2016 ರಂದು ನವದೆಹಲಿಯಲ್ಲಿ ಭಾರತ ಸರ್ಕಾರದ ಕೃಷಿ ಮಂತ್ರಾಲಯ ವತಿಯಿಂದ ಅಖಿಲ ಭಾರತ ಮಟ್ಟದಲ್ಲಿ ಪ್ರತಿ 2 ವರ್ಷಗಳಿಗೊಮ್ಮೆ ನಡೆಸಲಾಗುವ ಸಿ.ಎಂ.ಯು ಮೌಲ್ಯಮಾಪನದಲ್ಲಿ 2015–16 ನೇ ಸಾಲಿನಲ್ಲಿ ನಂದಿನಿ ವೀರ್ಯಾನು ಕೇಂದ್ರಕ್ಕೆ "ಎ ಶ್ರೇಣಿ" ವೀರ್ಯಾನು ಕೇಂದ್ರವೆಂದು ಗುರುತಿಸಿ ಶ್ರೀ ದೇವೇಂದ್ರ ಚೌಧರಿ, ಕಾರ್ಯದರ್ಶಿ, ಡಿಎ ಡಿಫ್, ಭಾರತ ಸರ್ಕಾರ ಇವರಿಂದ ಪ್ರಶಸ್ತಿಯನ್ನು ಕಹಾಮ ನಂದಿನಿ ವೀರ್ಯಾನು ಘಟಕದ ಮುಖ್ಯಸ್ಥರಾದ ಡಾ.ಕೆ.ರಾಮಚಂದ್ರಭಟ್ ರವರು ಸ್ವೀಕರಿಸಿದರು. ಶ್ರೀ ರಮೇಶ್ ಕುಮಾರ್, ಜಂಟಿ ಕಾರ್ಯದರ್ಶಿ, ಡಿಎಡಿಫ್, ಭಾರತ ಸರ್ಕಾರ ಹಾಗೂ ಡಾ.ಎಸ್.ಜಿ.ಗಡೇದ್, ಹಿರಿಯ ಉಪನಿರ್ದೇಶಕರು, ನಂದಿನಿ ವೀರ್ಯಾನು ಕೇಂದ್ರ ಇವರುಗಳು ಹಾಜರಿದ್ದರು.



ಶ್ರೀ ದೇವೇಂದ್ರ ಚೌಧರಿ, ಕಾರ್ಯದರ್ಶಿ, ಡಿಎಡಿಫ್, ಭಾರತ ಸರ್ಕಾರ ಇವರಿಂದ "ಎ – ಶ್ರೇಣಿ" ಪ್ರಶಸ್ತಿಯನ್ನು ಕಹಾಮ ನಂದಿನಿ ವೀರ್ಯಾಣು ಘಟಕದ ಮುಖ್ಯಸ್ಥರಾದ ಡಾ.ಕೆ. ರಾಮಚಂದ್ರಭಟ್ ರವರು ಸ್ವೀಕರಿಸುತ್ತಿರುವುದು.






ಜೆರ್ಸಿ ಹೋರಿ



ಉತ್ತಮ ತಳಿಯ ಮಿಶ್ರತಳಿ ಕರುಗಳು



ಎಚ್.ಎಫ್. ಹೋರಿ



ಮುಸ್ರತಳಿ–ಕೋಣ



"ಇಂದಿನ ಕರುಗಳೇ – ನಾಳಿನ ಕಾಮಧೇನುಗಳು"

PDF Compressor Free Version



# ಹೈನು ಅಭಿವೃದ್ಧಿಯಲ್ಲಿ ಮೇವಿನ ಬೆಳೆಗಳ ಮಹತ್ವ ಕಾರ್ಯಾಗಾರ



ಬಳ್ಳಾರಿ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರಾದ ಡಾ.ಬಿ.ಎನ್. ಕೃಷ್ಣೇಗೌಡರವರು, ಉದ್ಘಾಟನೆ ಮಾಡಿ, ವೇದಿಕೆಯಲ್ಲಿ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಿ. ಸತ್ಯನಾರಾಯಣ, ನಿರ್ದೇಶಕರಾದ ಶ್ರೀ ... ಸಂಪನ್ಮೂಲ ವ್ಯಕ್ತಿ ಡಾ.ವೆಂಕಟೇಶ್, ವಿಜ್ಞಾನಿ, ಹೈದರಾಬಾದ್, ಉಪಸ್ಥಿತರು ಹಾಜರಿದ್ದರು.



ರೈತರು ಹಾಗೂ ಅಧಿಕಾರಿಗಳು ಜೋಳದ ಮೇವಿನ ಬೆಳೆಯನ್ನು ವೀಕ್ಷಿಸುತ್ತಿರುವುದು.

ಬಳ್ಳಾರಿ, ಕೊಪ್ಪಳ, ರಾಯಚೂರು ಜಿಲ್ಲಾ ಹಾಲು ಒಕ್ಕೂಟದ ನೇತೃತ್ವದಲ್ಲಿ ದಿನಾಂಕ 08.12.2016 ರಂದು ಹೋಟೆಲ್ ನಕ್ಷತ್ರ ಬಳ್ಳಾರಿ ಇಲ್ಲಿ ಕರ್ನಾಟಕ ಹಾಲು ಮಹಾಮಂಡಳಿ ವ್ಯಾಪ್ತಿಯ ಹಾಲು ಒಕ್ಕೂಟಗಳ ಮೇವು ಅಭಿವೃದ್ಧಿ ಅಧಿಕಾರಿಗಳು, ವ್ಯವಸ್ಥಾಪಕರು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರುಗಳು ಸಮ್ಮುಖದಲ್ಲಿ ಹೈನು ಅಭಿವೃದ್ಧಿಯಲ್ಲಿ ಮೇವಿನ ಬೆಳೆಗಳ ಮಹತ್ವ ಎಂಬ ವಿಷಯವಾಗಿ ಚಿಂತನ–ಮಂಥನ ಕಾರ್ಯಾಗಾರವನ್ನು ಯಶಸ್ವಿಯಾಗಿ ಏರ್ಪಡಿಸಲಾಗಿರುತ್ತದೆ.

ಕಾರ್ಯಾಗಾರವನ್ನು ಬಳ್ಳಾರಿ ಹಾಲು ಒಕ್ಕೂಟದ ಅಧ್ಯಕ್ಷರಾದ ಶ್ರೀ.ಜಿ. ಸತ್ಯನಾರಾಯಣ ರವರು ಉದ್ಘಾಟಿಸಿ ಮಾತನಾಡಿ, ಕಳೆದ 18–20 ವರ್ಷಗಳಿಂದ ಹೈನೋದ್ಯಮದಲ್ಲಿ ನಂದಿನ ಪಶು ಆಹಾರದ ಕೊರತೆಯನ್ನು ನೋಡುತ್ತಲೇ ಬರುತ್ತಿದ್ದು, ಇದನ್ನು ಸರಿಪಡಿಸಲು ಹಸಿರು ಮೇವಿನ ಉತ್ಪಾದನೆ ಯೊಂದೇ ಮಾರ್ಗವೆಂದು ಪ್ರತಿಪಾದಿಸಿ, ಎಲ್ಲಾ ಹಾಲು ಒಕ್ಕೂಟಗಳಲ್ಲಿ ಮೇವು ಅಭಿವೃದ್ಧಿ ಬಗ್ಗೆ ಹೆಚ್ಚು ಒತ್ತನ್ನು ನೀಡಲು ಕರೆನೀಡಿದರು. ಬಳ್ಳಾರಿ ಹಾಲು ಒಕ್ಕೂಟದಲ್ಲಿ ಕೈಗೊಳ್ಳಲಾಗುತ್ತಿರುವ ಬೃಹತ್ ಬೀಜೋತ್ಪಾದನಾ ಕಾರ್ಯಕ್ರಮದಲ್ಲಿ ಪ್ರತಿ ಬೀಜೋತ್ಪಾದಕರು ಉತ್ಪಾದಿಸುವ ಬೀಜಗಳಿಗೆ ಪ್ರತ್ಯೇಕವಾಗಿ ಲಾಟ್ ನಂಬರ್ ನೀಡಿ ಗುಣಮಟ್ಟ ಹಾಗೂ ಬೆಳೆ ವೈಫಲ್ಯವನ್ನು ಗಮನಿಸಿ ಸೂಕ್ತ ಸಲಹೆ ನೀಡಲು ಅನುಕೂಲವಾಗುವುದರ ಬಗ್ಗೆ ಪ್ರಸ್ತಾಪಿಸಿ ಇದರಂತೆ ಕ್ರಮವಿಡಲು ತಿಳಿಸಿರುತ್ತಾರೆ.

ಬಳ್ಳಾರಿ ಹಾಲು ಒಕ್ಕೂಟದ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ:ಬಿ.ಎನ್.ಕೃಷ್ಣೇಗೌಡರವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಹೈನುಗಾರಿಕೆಯಲ್ಲಿ ಮೇವು ಅಭಿವೃದ್ಧಿ ಕಾರ್ಯಕ್ರಮಗಳು ಹಾಲು ಉತ್ಪಾದಕರ ಆರ್ಥಿಕ ಬೆಳವಣಿಗೆಯಲ್ಲಿ ನೇರವಾಗಿ ಮಹತ್ವದ ಪಾತ್ರ ವಹಿಸುವುದರಿಂದ ಹಸಿರು ಮೇವು ಅಭಿವೃದ್ಧಿಗೆ ಎಲ್ಲಾ ಒಕ್ಕೂಟಗಳು ಹೆಚ್ಚಿನ ಆದ್ಯತೆಯನ್ನು ನೀಡಲು ಕರೆಯಿತ್ತರು.

ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಡಾ: ವೆಂಕಟೇಶ್ ಭಟ್, ವಿಜ್ಞಾನಿಗಳು, ಭಾರತೀಯ ತೃಣಧಾನ್ಯ ಸಂಶೋಧನಾ ಸಂಸ್ಥೆ, ಹೈದರಾಬಾದ್ ರವರು ಕಾರ್ಯಾಗಾರದಲ್ಲಿ ಭಾಗವಹಿಸಿ ಹೈನೋದ್ಯಮ ಅಭಿವೃದ್ಧಿಯಲ್ಲಿ ಹಸಿರು ಮೇವಿನ ಬೆಳೆಗಳ ಮಹತ್ವದ ಬಗ್ಗೆ ಪ್ರಸ್ತಾಪಿಸಿ ಹಾಲು ಉತ್ಪಾದನೆ ಹೆಚ್ಚಿಸಲು ಹಾಗೂ ಹಾಲು ಉತ್ಪಾದನಾ ವೆಚ್ಚ ತಗ್ಗಿಸುವಲ್ಲಿ ಮೇವಿನ ಬೆಳೆಗಳು ಪ್ರಮುಖ ಪಾತ್ರವನ್ನು ವಹಿಸುವುದರಿಂದ ರೈತರು ಹೆಚ್ಚಿನ ಪ್ರದೇಶದಲ್ಲಿ ಮೇವಿನ ಬೆಳೆಗಳನ್ನು ಬೆಳೆಯಲು ಉತ್ತೇಜಿಸಲು ಅಧಿಕಾರಿಗಳಿಗೆ ಕರೆಯಿತ್ತರು. ಆಯಾ ಒಕ್ಕೂಟಗಳ ವಾತಾವರಣ, ವಾಡಿಕೆ ಮಳೆ, ಅನುಸಾರ ಉತ್ತಮ ಮೇವಿನ ಹಾಗೂ ನೂತನ ತಳಿಗಳ ಬೀಜಗಳನ್ನು ಉಪಯೋಗಿಸಲು ಸಲಹೆ ನೀಡಿದರು.






"ಹಸಿರು ಮೇವನ್ನು ಬೆಳೆಸಿ ಹಾಲು ಉತ್ಪಾದನೆ ಹೆಚ್ಚಿಸಿ"

PDF Compressor Free Version

# ಬರಗಾಲಕ್ಕೆ ಹೆದರದಿರಿ !
# ಉತ್ತಮ ರೀತಿಯಲ್ಲಿ ತಯಾರಿಸಿದ ರಸ ಮೇವನ್ನು ವರ್ಷ ಪೂರ್ತಿ ಪೌಷ್ಟಿಕ ಆಹಾರವನ್ನಾಗಿ ಜಾನುವಾರಗಳಿಗೆ ನೀಡಿ

## ಕರ್ನಾಟಕ ಸರ್ಕಾರದ ಮಾನ್ಯ ಪಶು ಸಂಘೋಪನ ಹಾಗೂ ರೇಷ್ಮೆ ಸಚಿವರಾದ ಶ್ರೀ. ಎ.ಮಂಜುರವರು ಭೇಟಿ. ಹಾಸನ ಜಿಲ್ಲೆ, ಅರಕಲಗೂಡಿನ "ಶ್ರೀ ಸುಬ್ರಮಣ್ಯ ಸ್ವಾಮಿ" ಜಾತ್ರಾ ಮಹೋತ್ಸವದಲ್ಲಿ "ನಂದಿನಿ ಉತ್ಪನ್ನ"ಗಳ ಪ್ರದರ್ಶನ ಹಾಗೂ ಅರಿವು ಕಾರ್ಯಕ್ರಮ.



ದಿನಾಂಕ: 05.12.2016ರಂದು ಹಾಸನ ಜಿಲ್ಲೆಯ, ಅರಕಲಗೂಡು ತಾಲ್ಲೂಕಿನ ರಾಮನಾಥಪುರ "ಶ್ರೀ ಸುಬ್ರಮಣ್ಯ ಸ್ವಾಮಿ" ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಲಾಗಿದ್ದ ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮಳಿಗೆಗೆ ಕರ್ನಾಟಕ ಸರ್ಕಾರದ "ಮಾನ್ಯ ಪಶು ಸಂಗೋಪನಾ ಹಾಗೂ ರೇಷ್ಮೆ ಸಚಿವರಾದ ಶ್ರೀ ಎ. ಮಂಜು" ರವರು ಭೇಟಿ ನೀಡಿ "ನಂದಿನಿ" ಉತ್ಪನ್ನಗಳ ಬಗ್ಗೆ ಮಾಹಿತಿ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಹಾಸನ ಮಾರಾಟ ಮಳಿಗೆಯ ಮುಖ್ಯಸ್ಥರಾದ ಶ್ರೀ ಗೋಪಾಲ್ ಹಾಗೂ ಮಾರಾಟ ಮಳಿಗೆಯ ಇತರ ಸಿಬಂಧಿಗಳು ಪಾಲ್ಗೊಂಡು ಗ್ರಾಹಕರಿಗೆ ಉತ್ಪನ್ನಗಳ ಬಗ್ಗೆ ಮಾಹಿತಿ ನೀಡಿದರು ಕಾರ್ಯಕ್ರಮಕ್ಕೆ ಆಗಮಿಸಿದ ಸಾರ್ವಜನಿಕರು ಈ ಬಗ್ಗೆ ಹರ್ಷ ವ್ಯಕ್ತಪಡಿಸಿದರು.

ವರದಿ : ಡಾ. ಬಸವರಾಜ್
ಜಂಟಿ ನಿರ್ದೇಶಕರು, (ಎಸ್ & ಡಿ)
ಕಹಾಮ ಬೆಂಗಳೂರು. ಮೊ.ನಂ. 9591994342

ಪುಟದ ನಂ. 11 ರಿಂದ ಮುಂದುವರೆಸಿದ ಭಾಗ

ಕಾರ್ಯಗಾರದಲ್ಲಿ ಹೈನುಗಾರಿಕೆಯನ್ನು ಲಾಭದಾಯಕವಾಗಿ ಹಾಗೂ ಉತ್ತಮ ಗುಣಮಟ್ಟದ ಅಧಿಕ ಹಾಲು ಉತ್ಪಾದನೆಗೆ ಅನುಸರಿಸಬಹುದಾದ ಹಸಿರು ಮೇವಿನ ವಿವಿಧ ವಿಧಾನಗಳ ಬಗ್ಗೆ ಚರ್ಚಿಸಿ ಈ ಕೆಳಕಂಡಂತೆ ನಿರ್ಣಯಿಸಲಾಗಿರುತ್ತದೆ.

1. ಮೇವು ಅಭಿವೃದ್ಧಿ, ಈ ಬಗ್ಗೆ ವಿವಿಧ ಸಂಶೋಧನಾ ಸಂಸ್ಥೆಗಳಿಂದ ಪರಿಣಿತರನ್ನು ಕರೆಯಿಸಿ ಈರೀತಿಯ ಕಾರ್ಯಗಾರವನ್ನು ಆಗಿಂದಾಗ್ಗೆ ನಡೆಸಿ ಇತ್ತೀಚಿನ ಸಂಶೋಧನೆಗಳನ್ನು ಕ.ಹಾ.ಮ. / ಒಕ್ಕೂಟದ ಅಧಿಕಾರಿಗಳಿಗೆ ಪರಿಚಯಿಸಲು ನಿರ್ಣಯಿಸಲಾಗಿತು.

2. ಆಫ್ರಿಕನ್ ಟಾಲ್ ಜೋಳದ ಬೀಜೋತ್ಪಾದನಾ ಇಳುವರಿ ಕಡಿಮೆಯಾಗಿದೆ, ಬಗ್ಗೆ ಪಂಜಾಬ್ ರಾಜ್ಯದ ಮುಸುಕಿನ ಜೋಳ ಸಂಶೋಧನಾ ಸಂಸ್ಥೆ, ಲೂದಿಯಾನ ಹಾಗೂ ಭಾರತೀಯ ಕೃಷಿ ಅನುಸಂಧಾನ ಪರಿಷತ್ ನಲ್ಲಿ ವಿಷಯವನ್ನು ಚರ್ಚಿಸಲು ತೀರ್ಮಾನಿಸಲಾಗಿತು.

3. 14 – ಹಾಲು ಒಕ್ಕೂಟಗಳ ಬೇಡಿಕೆ ಅನುಸಾರವಾಗಿ ವಿವಿಧ ಮೇವಿನ ಬೀಜಗಳ ಉತ್ಪಾದಿಸಿ, ಸಂಗ್ರಹಿಸಿ, ವಿತರಣೆ ಮಾಡಲು ಕೆ.ಎಂ.ಎಫ್. ಸೀಡ್ ಗ್ರಿಡ್‌ಗಳನ್ನು ಸ್ಥಾಪಿಸಲು ನಿರ್ಣಯಿಸಲಾಯಿತು.

4. ಉತ್ತರ ಕರ್ನಾಟಕದ ಬಳ್ಳಾರಿ, ರಾಯಚೂರು, ಧಾರವಾಡ, ಬಿಜಾಪುರ, ಹಾವೇರಿ ಮೇವಿನ ಮುಸುಕಿನ ಜೋಳ, ಎಸ್.ಎಸ್.ಜಿ. ಜೋಳ, COFS ಜೋಳ, ಮೇವಿನ ಅಲಸಂದೆ, ಹಾಗೂ ವೆಲ್ವೆಟ್ ಬೀನ್ಸ್, ಮತ್ತು ಕುದುರೆ ಮಸಾಲೆ ಬೀಜಗಳನ್ನು ಉತ್ಪಾದಿಸಲು ಸೂಕ್ತ ವಾತಾವರಣವಿದ್ದು ಬೀಜೋತ್ಪಾದನೆ ಕೈಗೊಳ್ಳಲು ಸೂಕ್ತ ಕ್ರಮ ಅನುಸರಿಸಲು ನಿರ್ಣಯಿಸಲಾಯಿತು.

5. ಧಾರವಾಡ, ಕೋಲಾರ, ಬಳ್ಳಾರಿ ಬೆಳಗಾವಿ ಹಾಗೂ ಬಿಜಾಪುರ ಮೇವು ಸಾಂದ್ರೀಕರಣ ಘಟಕಗಳನ್ನು ಶೀಘ್ರವಾಗಿ ಪ್ರಾರಂಭಿಸಿ ಮೇವಿನ ಬಿಲ್ಲೆಗಳನ್ನು ಉತ್ಪಾದಿಸಿ ರೈತರಿಗೆ ವಿತರಿಸಲು ತೀರ್ಮಾನಿಸಲಾಯಿತು.

6. ಅತ್ಯಧಿಕ ಪೌಷ್ಟಿಕಾಂಶಗಳನ್ನುಳ್ಳ ದ್ವಿದಳ ಮೇವಿನ ಬೀಜಗಳ ಉತ್ಪಾದನೆಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ಮೇವಿನ ಜೋಳದ ಜೊತೆ ದ್ವಿದಳ ಮೇವಿನ ಬೀಜಗಳನ್ನು ಸಹ ಮಿಶ್ರಣ ಮಾಡಿ ಮಿನಿ ಕಿಟ್‌ಗಳನ್ನು ತಯಾರಿಸಿ ರೈತರಿಗೆ ವಿತರಿಸಲು ತೀರ್ಮಾನಿಸಲಾಯಿತು.

ಹೈನು ಅಭಿವೃದ್ಧಿಯಲ್ಲಿ ಮೇವಿನ ಬೆಳೆಗಳ ಮಹತ್ವ ಕುರಿತು ನಡೆದ ಸಮಾರಂಭದಲ್ಲಿ ಒಕ್ಕೂಟದ ನಿರ್ದೇಶಕರಾದ ಶ್ರೀ. ಗುರುಸಿದ್ಧನಗೌಡ ರವರು ಸ್ವಾಗತ ಕಾರ್ಯಕ್ರಮವನ್ನು, ಕಾರ್ಯಗಾರದ ನಿರೂಪಣೆಯನ್ನು ಡಾ: ಸುನೀಲ್ ಸುಹೇಲ, ವ್ಯವಸ್ಥಾಪಕರು (ಶೀಕಿತಾ) ರವರು ನಿರ್ವಹಿಸಿ ಕಾರ್ಯನಿರ್ವಾಹಕ ನಿರ್ದೇಶಕರಾದ ಡಾ: ಬಿ.ಎನ್.ಕೃಷ್ಣೇಗೌಡ ರವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಗಾರದಲ್ಲಿ ಬಳ್ಳಾರಿ ಹಾಲು ಒಕ್ಕೂಟದ ಆಡಳಿತ ಮಂಡಳಿ ಸದಸ್ಯರು, ಅಧಿಕಾರಿಗಳು, ಸಿಬ್ಬಂದಿ ವರ್ಗ ಕಾರ್ಯಗಾರದಲ್ಲಿ ಉಪಸ್ಥಿತರಿರುತ್ತಾರೆ.



ಹಸಿರು ಮೇವು ಬಳಸಿ – ಹಾಲು ಉತ್ಪಾದನಾ ವೆಚ್ಚ ಇಳಿಸಿ

ವರದಿ: ಶ್ರೀ ಲಕ್ಷ್ಮಿ ಪ್ರಸಾದ್ ಯಾದವ್
ಜಂಟಿ ನಿರ್ದೇಶಕರು, ಕಹಾಮ
ಮೊ.ನಂ. 9591987744



Printed at : B.M. Ganapathy, Published by: Sri Rakesh Singh, I.A.S. Managing Director KMF on behalf of Karnataka Co-operative Milk Producers Federation Ltd., and Printed at Raja Printers, # 59, 4th Cross, Lalbagh Road, K.S. Garden, Bangalore-560 027, Ph.: 22284098, email: rajanprinters@gmail.com and Published at Karnataka Co-operative Milk Producers Federation Ltd., KMF Complex, Dr. Marigowda Road, Bangalore-560 029. Editor : Dr. Suresh Babu, Director A.H.

"ಜಾನುವಾರ ಸಂಪತ್ತು ದೇಶದ ಸಂಪತ್ತು"